ಅಲ್ಲಿ ಬಸ್ಸು ಮತ್ತು ರೈಲುಗಳ ಜೋಡು ಸೇತುವೆಯಿತ್ತು. ಅದರ ಕೆಳಗೆ ದೊಡ್ಡದೊಂದು ಅಣೆಕಟ್ಟೆಯಿತ್ತು. ಆ ಅಣೆಕಟ್ಟೆಯ ರಕ್ಷಣೆಗೆ ಇವರಿದ್ದ ಪ್ಲಟೂನ್‌ನ್ನು ನಿಯೋಜಿಸಲಾಗಿತ್ತು. ಸೆಪ್ಟೆಂಬರ್ 5ರಿಂದ 22 ರವರೆಗೆ ಎರಡು ದೇಶಗಳ ನಡುವೆ ಘನಘೋರ ಕಾಳಗ ನಡೆಯಿತು. ಇವರ ಇಪ್ಪತ್ತೊಂದು ಸಂಗಾತಿಗಳು ವೀರಮರಣಕ್ಕೀಡಾದರು. ಈ ಭಯಭೀತ ವಾತಾವರಣದಲ್ಲಿ ಹದಿನೆಂಟು ದಿನ ಕಳೆದ ಮಹಾಬಳೇಶ್ವರರು ಅಂದೇ ಕೈಯಲ್ಲಿ ಲೇಖನಿ ಹಿಡಿದರು. ಅವರು ಬರೆದ 'ಬಯೋನೆಟ್ ಫೈಟಿಂಗ್', ಮತ್ತು 'ಮಾತಿ ಅನಿ ಮಳಬ' ಕಾದಂಬರಿಗಳಲ್ಲಿ ಈ ಅನುಭವ ಮೂಡಿಬಂದಿದೆ. ಐದು ವರ್ಷ ಮುಗಿಯುವುದರಲ್ಲಿ ಅವರ ತಾಯಿ ನಿಧನರಾದರು. ಆಗ ಇವರು ರಾಜಸ್ಥಾನದ ಮರಳುಗಾಡಿನಲ್ಲಿದ್ದರು. ತಾಯಿ ಸತ್ತ ನಾಲ್ಕನೆಯ ದಿನ ಮನೆ ತಲುಪಿ ಧಾರ್ಮಿಕ ವಿಧಿವಿಧಾನಗಳನ್ನು ಮುಗಿಸಿ, ಮನೆಯ ಬಾಗಿಲಿಗೆ ಬೀಗ ಜಡಿದು ಹೋಗಬೇಕಾಯಿತು. ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ಹೊಲದ ಕೆಲಸಗಳಿದ್ದವು. ದನಕರುಗಳಿದ್ದವು. ಅದಕ್ಕೆಲ್ಲ ತಾತ್ಕಾಲಿಕ ವ್ಯವಸ್ಥೆ ಮಾಡಿಟ್ಟು, ಸೈನ್ಯಕ್ಕೆ ಮರಳಿ ಮೇಲಧಿಕಾರಿಗಳಿಗೆ ಮನೆಯ ಪರಿಸ್ಥಿತಿ ಮನದಟ್ಟು ಮಾಡಿಕೊಟ್ಟು, ಮಿಲಿಟರಿಯಿಂದ ಬಿಡುಗಡೆಗೊಂಡು ಮರಳಿ ಮನೆಗೆ ಬರಬೇಕಾದರೆ ಒಂದು ವರ್ಷ ಹಿಡಿಯಿತು. ಏಳನೆಯ ವರ್ಷದ ಆರಂಭಕ್ಕೆ ಬಿಡುಗಡೆಗೊಂಡರೂ, ಕೃಷಿಗಾಗಿ ಮನೆಯಲ್ಲಿ ಇರುವುದೋ, ನೌಕರಿಗೆ ಹೋಗುವುದೋ ಎಂದು ನಿರ್ಧಾರ ಮಾಡುವಷ್ಟರಲ್ಲಿ ಎರಡು ತಿಂಗಳು ಕಳೆಯಿತು. ಕೃಷಿ ಕ್ಷೇತ್ರದ ಕಷ್ಟ ಸುಖಗಳನ್ನು ಉಂಡಿದ್ದ ಮಹಾಬಳೇಶ್ವರರಿಗೆ ನೌಕರಿಗೆ ಹೋಗುವುದೇ ಉತ್ತಮ ಎನಿಸಿತು.

ಅದೇ ಹೊತ್ತಿಗೆ ಯಲ್ಲಾಪುರದ ಒಬ್ಬ ಗುತ್ತಿಗೆದಾರರು ಮಹಾಬಳೇಶ್ವರ ಅವರನ್ನು ವಿದ್ಯುತ್ ಕಂಬಗಳ ಸೂಪರ್‌ವೈಸರ್ ಆಗಿ ನೇಮಿಸಿಕೊಂಡರು. ಅಲ್ಲಿ ಇವರು ಒಂದು ವರ್ಷ ಕೆಲಸ ಮಾಡಿದರು. ಆ ಕೆಲಸದಲ್ಲಿ, ಕಾಡಿನಲ್ಲೆಲ್ಲ ಸೈಕಲ್ ಹೊಡೆಯಬೇಕಿತ್ತು, ನಡೆಯಬೇಕಿತ್ತು. ದಟ್ಟಕಾಡಿನಲ್ಲಿ ಹಿಂಸ್ರ ಪ್ರಾಣಿಗಳ ನಡುವೆ ಹಕ್ಕಿಪಕ್ಕಿಗಳ ಸಾಂಗತ್ಯದಲ್ಲಿ ನಿಶ್ಶಬ್ದ ಕಾಡಿನಲ್ಲಿ ಭಯಂಕರ ವಾತಾವರಣದಲ್ಲಿ ಸುತ್ತಾಡಬೇಕಿತ್ತು. ಈ ಕೆಲಸದಿಂದಾಗಿ ಅವರಿಗೆ ಕಾಡಿನ ಬಗ್ಗೆ ಪ್ರೀತಿ ಬೆಳೆಯಿತು.





ಆದರೆ, ಇವೆಲ್ಲದರ ಆಚೆಗೊಂದು ನಿಗೂಢ ಜಗತ್ತು ಇದೆಯೆಂದು ಅನಿಸುತ್ತಿತ್ತು. 'ಕಾಡಿನಲ್ಲಿ ಓಡಾಡಲು ನನಗೆ ಖುಷಿಯಾಗುತ್ತಿತ್ತು. ಈ ಅನುಭವ ನನಗೆ ಮುಂದೆ ಸಾಹಿತ್ಯ ನಿರ್ಮಿತಿಯಲ್ಲಿ ಬಹಳ ಸಹಾಯ ಮಾಡಿದವು' ಎನ್ನುತ್ತಾರೆ ಮಹಾಬಳೇಶ್ವರ. ಅವರ 'ಅದೃಷ್ಟ', 'ಅರಣ್ಯಕಾಂಡ', ಕಾದಂಬರಿಗಳಲ್ಲಿ ಕಾಡಿನ ಚಿತ್ರಣ ದಟ್ಟವಾಗಿ ಮೂಡಿ ಬಂದಿದೆ. ಇವೆರಡು ಕಾದಂಬರಿಗಳನ್ನು ಡಾ.ಗೀತಾ ಶೆಣೈ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಪಲ್ತಡಚೋ ಮನೀಸ' ನೀಳ್ಗತೆಯಲ್ಲಿಯೂ ಕಾಡಿನ ನಿಗೂಢ ಜಗತ್ತಿನ ವರ್ಣನೆಯಿದೆ. ಈ ನೀಳ್ಗತೆ ಕೊಂಕಣಿ ಚಲನಚಿತ್ರವಾಗಿ ಜನಪ್ರಿಯವಾಯಿತು.

ಮಹಾಬಳೇಶ್ವರರು ತಮ್ಮ ಭವಿಷ್ಯ ತಾವೇ ನಿರ್ಮಿಸಿಕೊಳ್ಳಬೇಕಿತ್ತು. ಯಲ್ಲಾಪುರದ ಕೆಲಸದಲ್ಲಿ ಸ್ಥಿರತೆಯಿರಲಿಲ್ಲ. ಪ್ರೀತಿಯಿಂದ ಮಾಡುವ ಕೆಲಸವೂ ಅದಾಗಿರಲಿಲ್ಲವಾದ್ದರಿಂದ ಸ್ಥಿರತೆಯಿರುವ ಕೆಲಸದ ಹುಡುಕಾಟದಲ್ಲಿದ್ದಾಗ ಅವರಿಗೆ ಗೋವಾದಲ್ಲಿ ತರಬೇತಿ ಪಡೆದರೆ ಪೊಲೀಸ್ ಕೆಲಸ ಸಿಗುತ್ತದೆಯೆಂದು ಯಾರೋ ಹೇಳಿದ್ದರು. ಹಾಗಾಗಿ 1967ರ ಜೂನ್ 22ರಂದು ಗೋವಾಕ್ಕೆ ಬಂದು ಪಾಲ್‌ಪೋಯಲ್ಲಿದ್ದ ಪೊಲೀಸ್ ತರಬೇತಿ ಕೇಂದ್ರ ಸೇರಿ ಆರು ತಿಂಗಳು ತರಬೇತಿ ಪಡೆದು ಆಲ್‌ರೌಂಡರ್ ಕಾನ್‌ಸ್ಟೆಬಲ್ ಎಂದು ನಿಯುಕ್ತರಾದರು. ಇವರು ತರಬೇತಿಯಲ್ಲಿ ತೋರಿದ ಕೌಶಲ ನೋಡಿ, 'ಪಾಸಿಂಗ್ ಔಟ್'